ಚಿಂತಿಸಿ ಸಾವಿತ್ರಿಬಾಯಿ ಆತಂಕಪಟ್ಟುಕೊಂಡಳು.

ಅವಳು ಯೋಚಿಸಿದ ರೀತಿಯಲ್ಲಿಯೇ ಆ ದಿನ ಅವರ ಮನೆಯಲ್ಲಿ ದೊಡ್ಡ ರಾಮಾಯಣವೇ ನಡೆಯಿತು. ಭಾವ್ರೂ ಸರಿಯಾದ ರೀತಿಯಲ್ಲಿ ಉಡುಪು ಧರಿಸದೇ ಇದ್ದುದಕ್ಕೆ ಮತ್ತು ತನ್ನ ಕೈಗಳನ್ನು ಹಿಡಿದುಕೊಂಡದ್ದಕ್ಕೆ ಸೀಮಾ ಬೇರೆಯೇ ಅರ್ಥವನ್ನು ಕಲ್ಪಿಸಿದ್ದಳು. ದೀಪಕ್ ಮನೆಗೆ ಬಂದ ಕೂಡಲೇ ತನ್ನ ಮೇಲೆ ಬಲಾತ್ಕಾರದ ಪ್ರಯತ್ನ ನಡೆದುದ್ದಾಗಿ ಆಕೆ ಹೇಳಿದಳು. ಇದನ್ನು ಕೇಳಿ ದೀಪಕನಿಗೆ ಸಿಟ್ಟು ಉಂಗುಷ್ಠದಿಂದ ನೆತ್ತಿಗೇರಿತು. ಅವನು ಏನು ಎತ್ತ ಎಂದು ವಿಚಾರಿಸುವ ಗೊಡವೆಗೆ ಹೋಗದೆ ನೇರವಾಗಿ ಭಾವ್ರೂ ಮುಖದ ಮೇಲೆ ಹೊಡೆಯಲಾರಂಭಿಸಿದ. ಆ ಹೊಡೆತಕ್ಕೆ ಭಾವ್ರೂ ತುಟಿ ಒಡೆದು ರಕ್ತ ಹರಿಯಲಾರಂಭಿಸಿತು. ಅದನ್ನು ನೋಡಲಾರದೆ ನಡುವೆ ತಡೆಯಲು ಬಂದ ಸಾವಿತ್ರಿಯನ್ನು ದೀಪಕ್ ತಳ್ಳಿ ಹಾಕಿದ. ಕೆಳಗೆ ಬಿದ್ದ ಸಾವಿತ್ರಿಯ ಸೊಂಟಕ್ಕೆ ನೋವಾಯಿತು.

ಅದೇ ದಿನ ದೀಪಕ ಮನೆ ಬಿಟ್ಟು ಹೋಗುವ ನಿರ್ಧಾರವನ್ನು ಕೈಗೊಂಡ. ಈ ನಿರ್ಧಾರದ ಹಿಂದೆ ಸೀಮಾಳ ಚಿಂತನೆಯೂ ಇದೆ ಎಂದು ಸಾವಿತ್ರಿಗೆ ಗೊತ್ತಿತ್ತು. ಅವಳಿಗೆ ಬಹು ಸಮಯದಿಂದ ಬೇರೆ ಮನೆ ಮಾಡಿಕೊಂಡಿರುವ ಬಯಕೆ ಇತ್ತು. ಅದಕ್ಕಾಗಿ ಅವಳು ಅವಕಾಶವನ್ನು ಹುಡುಕುತ್ತಿದ್ದಳು. ದೀಪಕ ತಂಗಿಗೆ ಕರೆ ಮಾಡಿ ನಡೆದುದ್ದನ್ನೆಲ್ಲಾ ಸ್ವತಃ ಕಣ್ಣಾರೆ ನೋಡಿದ ಹಾಗೆ ವಿವರಿಸಿದ. ಅದೇ ರಾತ್ರಿ ಗೌರಿ ಮನೆಗೆ ಬಂದಳು. ಅವಳು ಕಟು ಮಾತುಗಳಿಂದ ತಂದೆಯನ್ನು ಚೆನ್ನಾಗಿ ಜಾಡಿಸಿದಳು. ನಡೆದುದಕ್ಕೆ ತಾಯಿಯನ್ನೂ ಕಾರಣವಾಗಿಸಲು ಅವಳು ಮರೆಯಲಿಲ್ಲ. ಬಂದ ಹಾಗೆ ಅವಳು ಮರುದಿನವೇ ಹಿಂತಿರುಗಿ ಹೋದಳು.

ಮಗಳ ಮಾತು ಕೇಳುವಾಗ ಅದಕ್ಕೆ ಸರಿಯಾದ ಉತ್ತರ ನೀಡಬೇಕೆಂದು ಸಾವಿತ್ರಿಗೂ ಅನಿಸಿತ್ತು, "ಈಗ ಯಾವ ಅಧಿಕಾರದಿಂದ ಮಾತನಾಡುತ್ತಿರುವೆ ಮಗಳೇ. ಅಪ್ಪನನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋಗಲು ನಿನ್ನಿಂದ ಸಾಧ್ಯವಾಗಲಿಲ್ಲ. ಈಗ ಯಾವ ಹಕ್ಕಿನಿಂದ ಈ ರೀತಿಯ ಮಾತುಗಳನ್ನೆಲ್ಲಾ ಆಡುತ್ತಿರುವೆ ನೀನು?"

ಮನಸ್ಸಿನಲ್ಲಿ ಹೊಳೆದ ಮಾತುಗಳನ್ನು ಸಾವಿತ್ರಿ ಆಡಿ ತೋರಿಸಲಿಲ್ಲ. ಆಕೆ ಬಾಯಿಮುಚ್ಚಿ ಮೌನವಾಗಿದ್ದಳು. ಮಾತಿಗೆ ಮಾತು ಬೆಳೆಸುವುದು.. ಆಮೇಲೆ ಧ್ವನಿ ಎತ್ತರಿಸಿ ಜಗಳ ನಡೆಸುವುದು. ಆಗ ನೆರೆಹೊರೆಯವರೆಲ್ಲಾ ಬಂದು ಸೇರುವುದು... ಆಮೇಲೆ ಈ ಸುದ್ದಿ ಊರೆಲ್ಲಾ ಹರಡುವುದು. ಯಾರಿಗೆ ಬೇಕು ಈ ರಗಳೆ. ಸ್ವಾರ್ಥಿ ಮಕ್ಕಳ ಜೊತೆಯಲ್ಲಿ ಈ ರೀತಿ ಇರುವುದೇ ಉತ್ತಮ. ಕೆಟ್ಟದ್ದು ಒಳ್ಳೆಯದು ಏನೇ ಇದ್ದರೂ ಅದನ್ನು ಅನುಭವಿಸುವವರು ಕೊನೆಗೆ ಅವರೇ...' ಹೀಗೆ ತನ್ನನ್ನು ಸಂತೈಸಿದಳು ಸಾವಿತ್ರಿ.

ಸಾವಿತ್ರಿ ಸ್ವತಃ ತನ್ನನ್ನು ಸಂತೈಸಿ ಸುಮ್ಮನಿದ್ದುದು ನಿಜ. ಆದರೆ, ದೀಪಕ ಹೊರಡುವ ತಯಾರಿ ನಡೆಸಿ, ಒಂದೊಂದೇ ಸಾಮಾನು ಕಟ್ಟುವ ಕಾರ್ಯದಲ್ಲಿ ತೊಡಗಿಕೊಳ್ಳುವುದನ್ನು ನೋಡಿ ಅವಳ ಕೈಕಾಲು ನಡುಗಲಾರಂಭಿಸಿದವು. ಮುಂದೆ ಏನಾಗಬಹುದು? ಏನಾಗುತ್ತದೆ? ನಾನು ಎಲ್ಲವನ್ನೂ ಹೇಗೆ ಸಂಭಾಳಿಸಬಲ್ಲೆ? ಪ್ರಶ್ನೆಗಳು ಹೆಡೆ ಎತ್ತಿದ ಸರ್ಪದ ಹಾಗೆ ಅವಳನ್ನು ನಿರಂತರ ಕಾಡುತ್ತಿದ್ದವು.

ಮುಂಜಾನೆ ಬೆಳಕು ಮೂಡುವಾಗ ದೀಪಕ ಮನೆ ಬಿಟ್ಟು ಹೋಗುತ್ತಾನೆ. ಅವನು ಸಿಟ್ಟು ಮಾಡಿಕೊಂಡು ಇರುತ್ತಿದ್ದುದು ನಿಜ. ಆದರೆ, ಮನೆಯಲ್ಲಿ ಇದ್ದಾನಲ್ಲಾ ಎನ್ನುವ ಸಮಾಧಾನವಿತ್ತು. ಏನೇ ಆತಂಕದ ಪರಿಸ್ಥಿತಿ ಉಂಟಾದರೂ ಅವನು ಧಾವಿಸಿ ಬರುತ್ತಾನೆ ಎನ್ನುವ ಧೈರ್ಯವೂ ಇತ್ತು. ಈಗ ಮನೆ ಬಿಟ್ಟು ಹೋದ ಬಳಿಕ ನಮ್ಮನ್ನು ವಿಚಾರಿಸಲು ಅವನು ಆಗಾಗ ಬರಬಹುದೇ. ದೇವರೇ, ನನ್ನ ಪಾಲಿಗೆ ಎಂತಹ ಪ್ರಸಂಗ ತಂದೆಯಲ್ಲಾ... ಭವಿಷ್ಯವನ್ನು ನೆನೆದು ಸಾವಿತ್ರಿಯ ತಲೆಯೇ ಕೆಟ್ಟು ಹೋಯಿತು. ಅವಳು ಎರಡೂ ಕೈಗಳಿಂದ ತಲೆಯನ್ನು ಗಟ್ಟಿಯಾಗಿ ಹಿಡಿದು ಕಣ್ಣುಮುಚ್ಚಿದಳು. ಹೀಗೆ ತಾನು ಎಷ್ಟು ಹೊತ್ತಿನವರೆಗೆ ಮಲಗಿಕೊಂಡಿದ್ದೆ ಎಂದು ಸ್ವತಃ ಅವಳಿಗೇ ತಿಳಿಯಲಿಲ್ಲ. ಇದ್ದಕ್ಕಿದ್ದಂತೆ ಭಾವ್ರೂ ಮಾತುಗಳು ಕಿವಿಗೆ ಬಿದ್ದು ಅವಳಿಗೆ ಎಚ್ಚರವಾಯಿತು.

ಭಾವ್ರೂ ನಿದ್ದೆಯಲ್ಲಿ ಬಡಬಡಿಸುತ್ತಿದ್ದರು. "ಸಾವಿತ್ರೀ. ಸಾವಿತ್ರೀ... ನೀನು ನನ್ನ ಸಾವಿತ್ರಿ, ನಾನು ನಿನ್ನ ಸತ್ಯವಾನ. ಯಮನ ಬಳಿಯಿಂದ ನನ್ನ ಪ್ರಾಣ ತೆಗೆದುಕೊಂಡು ಬಾ ಸಾವಿತ್ರೀ..."